ಫೋನ್ ತೆಗೆದುಕೊಳ್ಳದೆ "ಇವತ್ತು ಮನೆಗೆ ಬರುವುದು ಲೇಟ್ " ಎಂದು ಮೆಸೇಜ್ ಮಾಡಿದಳು.

ಪ್ರತಿ ಶುಕ್ರವಾರ ಇದೇ ಪರಿಪಾಠವಾಯಿತು. ಅವನ ಸಮಕ್ಕೇ ಕುಡಿಯುವುದನ್ನು ಇವಳೂ ಕಲಿತಳು.

ಅಪ್ಪ ಅಮ್ಮ ಇಬ್ಬರಿಗೂ ಚಿಂತೆ ಪ್ರಾರಂಭವಾಯಿತು - ಯಾವುದೋ ಸಮಯಕ್ಕೆ ಬರುತ್ತಾಳೆ. ಬಂದವಳು ಯಾರ ಜೊತೆಯೂ ಮಾತನಾಡದೆ ತನ್ನ ರೂಮಿಗೆ ಹೋಗಿ ಮಲಗುತ್ತಾಳೆ. ಯಾರ ಕಾರಿನಲ್ಲಿ ಬರುತ್ತಾಳೋ? ಯಾರೋ ಅವನು? ಬೆಳಗ್ಗೆ ಎದ್ದು ಹೊರಟು ಬಿಡುತ್ತಾಳೆ.

ತಾಯಿ ಒಮ್ಮೆ ಮಗಳನ್ನು ತಡೆದು ಕೇಳಿದರು.

"ಇದೇನೇ ವಿಪರೀತ?"

"ವಿಪರೀತ ಏನೂ ಇಲ್ಲ. ನಾನು ಲ್ಯಾಬಿನಲ್ಲಿ ಯಾವುದೋ ದೊಡ್ಡ ಪ್ರಾಜೆಕ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ತುಂಬಾ ಬಿಜಿ. ನೀವೇನೂ ಯೋಚನೆ ಮಾಡಬೇಡಿ..."

"ಆದಾರ ಜೊತೆನೋ ಕಾರ್ ನಲ್ಲಿ ಬರ್ತಿಯಲ್ಲೇ, ಯಾರವನು?"

"ಅಮ್ಮಾ ಅದು ನಮ್ಮ ಪ್ರೊಫೆಸರ್, ಅವರ ಹೆಸರು ವಿಲಿಯಮ್ ಟರ್ನರ್. ಮುಖ್ಯವಾದ ಕೆಲಸ. ಅದಕ್ಕೇ ಅವರೇ ಮನೆಗೆ ಕರಕೊಂಡು ಬರ್ತಾರೆ."

ಅಪ್ಪ ಅಮ್ಮನಿಗೆ ಏನೋ ಭರವಸೆ ಮೂಡಿತು, ಆದರೆ, ಮುಂದಿನ ತಿಂಗಳು ನಯನಾ ಮನೆ ಬಿಟ್ಟು, ವಿಶ್ವವಿದ್ಯಾಲಯದ ಹತ್ತಿರ ರೂಮ್ ಮಾಡಿಕೊಂಡು ಹೊರಟದ್ದು ಅವರಿಗೆ ಅರ್ಥವಾಗಲಿಲ್ಲ. ಅವಳೇನೋ "ಕೆಲಸ ವಿಪರೀತ, ರಾತ್ರಿಯೆಲ್ಲಾ ಅಲ್ಲಿಯೇ ಇರಬೇಕಾಗುತ್ತದೆ." ಎಂಬ ಕಾರಣ ನೀಡಿದಳು.

ಮುಂದಾದ ಘಟನೆಗಳು ಅವರಿಬ್ಬರ ಅರಿವಿಲ್ಲದೆಯೇ ಒಂದಕ್ಕೊಂದು ಪೋಣಿಸಿಕೊಂಡು ಜರುಗಿದವು. ಟರ್ನರ್ ತಾನು ಕೊಂಡ ಹೊಸ ಕಾರಿನಲ್ಲಿ ಇವಳನ್ನು ಊರೆಲ್ಲಾ ಓಡಾಡಿಸಿದ. ಮನೆಗೂ ಕರೆದೊಯ್ದ. ತನಗೆ ತಿಳಿದಿದ್ದರೂ ನಯನಾ ಕೇಳಿದಳು.

"ನಿಮ್ಮ ಹೆಂಡತಿ, ಮಕ್ಕಳು ಎಲ್ಲಿ?"

"ಅವರೆಲ್ಲಾ ಬೇರೆ ಇದ್ದಾರೆ. ನಾನೊಬ್ಬ ಡೈವೋರ್ಸಿ."

ಸಲಿಗೆ ಮತ್ತಷ್ಟು ಬೆಳೆಯಿತು. ಒಮ್ಮೊಮ್ಮೆ ಅವನು ಇವಳ ರೂಮಿಗೇ ಬಂದುಬಿಡುತ್ತಿದ್ದ. ಇಬ್ಬರ ಆಪ್ತವ್ಯವಹಾರಗಳು ಗುಟ್ಟಾಗಿಯೇ ಜರುಗುತ್ತಿದ್ದವು. ಆದರೆ, ಇಬ್ಬರಿಗೂ ಲಂಗು ಲಗಾಮು ಇರಲಿಲ್ಲ. ವಾರಾಂತ್ಯದಲ್ಲಿ ಬ್ಲೂ ಮೌಂಟನ್, ಕೈಯಾಮಾ ಮೊದಲಾದ ವಿಶ್ರಾಂತಿ ಧಾಮಗಳಿಗೆ ಹೋಗುತ್ತಿದ್ದರು.

ಮಗಳು ಶನಿವಾರ, ಭಾನುವಾರವೂ ಮನೆಗೆ ಬರದಿದ್ದುದನ್ನು ಕಂಡು ತಂದೆ, ತಾಯಿ ಚಿಂತಾಕ್ರಾಂತರಾದರು. ಫೋನಿಗೂ ಸರಿಯಾಗಿ ಸಿಗುತ್ತಿರಲಿಲ್ಲ.

"ಹೆಣ್ಣು ಹುಡುಗಿ ಯಾವ ಪುರುಷಾರ್ಥಕ್ಕೆ ಹೀಗೆ ದಿನಾ ರಾತ್ರಿ ದುಡಿಯಬೇಕು? ಈ ರಿಸರ್ಚ್ ಬಿಟ್ಟು ಮನೆಗೆ ಬಾ. ಬೇರೆ ಕೆಲಸ ಹುಡುಕಿಕೊ. ಇನ್ನು ನೀನು ಮದುವೆಯಾಗೋದು ಯಾವಾಗ?"

ಒಮ್ಮೆ ನಾಲ್ಕು ದಿನಗಳ ರಜ ಬಂದಾಗ ಟರ್ನರ್ ತನ್ನ ಸಂಬಂಧಿಗಳನ್ನು ನೋಡಲು ಬ್ರಿಸ್ಬೇನಿಗೆ ಹೋದ. ವಿಧಿ ಇಲ್ಲದೆ ನಯನಾ ಮನೆಗೆ ಬಂದಳು. ಮನೆಯವರಿಗೆ ಅವಳು ಬಹಳ ಬದಲಾದಂತೆ ತೋರಿತು. ಅವಳು ಹೊರಗಿನವರಂತೆ ಮಾತನಾಡುತ್ತಿದ್ದಳು. ಮತ್ತೆ ಮದುವೆಯ ಪ್ರಶ್ನೆ ಎದ್ದಿತು. ಅವಳಿಟ್ಟ ಉತ್ತರ ಎಲ್ಲರಿಗೆ ದಿಗಿಲನ್ನು ತಂದಿತ್ತು.

"ಹುಡುಗಿ ಹುಡುಗ ಒಟ್ಟಿಗೆ ಇರೋದು ತಾನೇ ಮದುವೆ ಅಂದರೆ? ಅದಕ್ಕೆ ಶಾಸ್ತ್ರ ಸಂಬಂಧ ಎಲ್ಲಾ ಏಕೆ ಬೇಕು ? ಒಬ್ಬ ಹುಡುಗಿ ಒಬ್ಬ ಹುಡುಗನ ಜೊತೆ ಇದ್ದರೆ ಆಯಿತಲ್ವಾ?'' ತಂದೆಗೆ ಕೋಪವೇ ಬಂದಿತ್ತು.

"ಹಾಗಾದರೆ ನೀನು ಯಾರ ಜೊತೆಯಾದರೂ ಇದ್ದೀಯ?"

"ಇನ್ನೂ ಇಲ್ಲ. ಯಾರಾದರೂ ಸಿಕ್ಕರೆ ಹಾಗೆಯೇ ಮಾಡ್ತೀನಿ. ನೀವು ಆ ಸುದ್ದಿಗೆ ಬರಬೇಡಿ."

ಅವಳು ಮನೆಯಿಂದ ರೂಮಿಗೆ ಹೊರಟಾಗ ಯಾರಿಗೂ ಬೇಜಾರಾಗಲಿಲ್ಲ. ಮನೆಯಲ್ಲಿ ಒಂದು ತರಹದ ನೆಮ್ಮದಿ ನೆಲೆಸಿತು.

ಅವರಿಬ್ಬರ ಗುಪ್ತ ವ್ಯವಹಾರಗಳು ಜರುಗುತ್ತಿದ್ದ ವೇಗದಲ್ಲಿಯೇ ನಯನಾಳ ಸಂಶೋಧನೆಗಳೂ ಯಶಸ್ವಿಯಾಗಿ ಜರುಗುತ್ತಿದ್ದವು ಎಂಬುದು ಗಮನಾರ್ಹ. ಎಷ್ಟಾದರೂ ಬುದ್ಧಿವಂತೆ. ಕೆಲವು ಅತ್ಯುತ್ತಮ ಫಲಿತಾಂಶಗಳನ್ನು ಪಡೆದಿದ್ದಳು. ಎರಡು ವರ್ಷಗಳಲ್ಲಿ ಹತ್ತು ಪೇಪರುಗಳಾದವು. ಅವುಗಳಲ್ಲಿ ನಾಲ್ಕನ್ನು ಮಂಡಿಸಲು ಅವಳು ಅಮೆರಿಕಾ, ಜರ್ಮನಿ, ಸ್ವಿಟ್ಜರ್‌ಲೆಂಡ್‌ಗಳಲ್ಲಿ ನಡೆದ ಅಂತರರಾಷ್ಟ್ರೀಯ